| | | |
|---|---|---|
| OS | 114/2025 | ಡಿ.ಡಬ್ಲ್ಯೂ 1 |

ಇಂದು ದಿಃ 13.07.2026. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಕೆ ಟಿ ಆರ್ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿರುತ್ತೇನೆ. ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಡಿ 1 | ಅಧಿಕಾರ ಪತ್ರ |

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ

ದಾನ ಪತ್ರದ ವಿಚಾರ ನನಗೆ ಗೊತ್ತು. ನನ್ನ ತಂದೆ 1ನೇ ಪ್ರತಿವಾದಿಗೆ ದಾನ ಪತ್ರದ ಆಸ್ತಿಯು ವಿಭಾಗದ ಮೂಲಕ ಬಂದಿರುತ್ತದೆ. ವಿಭಾಗ ಪತ್ರದ ಒಕ್ಕಣೆಯನ್ನು ನಾನು ಪೂರ್ತಿಯಾಗಿ ಓದಿದ್ದೇನೆ. ನಿ ಪಿ 4ರ 5ನೇ ಪುಟದ ಮೇಲ್ಕಂಡ ಎ ಷೆಡ್ಯೂಲ್ ಸ್ವತ್ತು ಒಂದೇ ಪಾರ್ಟಿ ಶ್ರೀ.ಟಿ.ಎಂ.ಚನ್ನಬಸವಣ್ಣ ಉರುಫ್ ಟಿ.ಎಂ ಚನ್ನಬಸಪ್ಪ ಇವರ ಹಿಸ್ಸೆಗೆ ಸೇರಿದ ಸ್ವತ್ತಾಗಿರುತ್ತದೆ. ಈ ಮೇಲ್ಕಂಡ ನಾಲ್ಕು ಐಟಂ ಸ್ವತ್ತುಗಳನ್ನು ಇವರು ಜೀವಂತವಾಗಿರುವ ತನಕ ಉಪಯೋಗಿಸಿಕೊಂಡು ಇವರ ಕಾಲಾನಂತರ ಐಟಂ ನಂ.1 ರ ಸ್ವತ್ತನ್ನು ಡಿ ಷೆಡ್ಯೂಲ್‌ದಾರರಾದ ಶ್ರೀ.ದಯಾನಂದಸ್ವಾಮಿ ರವರಿಗೆ ಮತ್ತು ಐಟಂ ನಂ.2ರ ಸ್ವತ್ತು ಸಿ ಷೆಡ್ಯೂಲ್‌ದಾರಳಾದ ಶ್ರೀಮತಿ ಮಮತರವರಿಗೆ ಸೇರತಕ್ಕದ್ದು ಹಾಗೂ ಐಟಂ ನಂ.3 ರ ಸ್ವತ್ತು ಐಟಂ ನಂ.4ರ ಸ್ವತ್ತು ಇ ಷೆಡ್ಯೂಲ್‌ದಾರರಾದ ಟಿ.ಸಿ. ಮಹೇಶರವರಿಗೆ ಸೇರತಕ್ಕದ್ದು ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ 4 ರ ಪ್ರಕಾರ ಈ ಮೇಲಿನ ಉಲ್ಲೇಖದ ಪ್ರಕಾರ ನನ್ನ ತಂದೆಗೆ ಜೀವಿತಾವಧಿಯವರೆಗೆ ಅನುಭವಿಸುವ ಅಧಿಕಾರ ಇದೆ ಹೊರತಾಗಿ ಪರಭಾರೆ ಮಾಡುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.